# ಓಂ ಣಮೋ ದೇಸಾಯಿ ಶಾಂತಿನಾಥಾಯ...

'ಮುಕ್ತಿ', 'ವಿಕ್ಷೇಪ', 'ಸೃಷ್ಟಿ', 'ಸಂಬಂಧ', 'ಬೀಜ', 'ಅಂತರಾಳ', 'ಕ್ಷಿತಿಜ', 'ದಂಡೆ', 'ರಾಕ್ಷಸ' ಕೃತಿಗಳನ್ನು ಕೊಟ್ಟ ಶಾಂತಿನಾಥ ದೇಸಾಯಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಎತ್ತರಕ್ಕೆ ತೆಗೆದುಕೊಂಡು ಹೋದ ಲೇಖಕ. ವಿಮರ್ಶಕ, ಭಾಷಾ–ಶೈಲೀಶಾಸ್ತ್ರಜ್ಞ, ನಾಟಕಕಾರ, ಅನುವಾದಕ, ಉತ್ತಮ ಶಿಕ್ಷಕರಾಗಿದ್ದ ದೇಸಾಯಿಯವರ ಆಪ್ತ ಚಿತ್ರವನ್ನು ಅವರ ಗೆಳೆಯ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಇಲ್ಲಿ ಕೊಟ್ಟಿದ್ದಾರೆ.

ಕಲೆ: ಬಿ.ಜಿ. ಗುಜ್ಜಾರಪ್ಪ

ಶಾಂತಿನಾಥ ದೇಸಾಯಿ ಧಾರವಾಡದ ಕರ್ನಾಟಕ ಹೈಸ್ಕೂಲು, ಕರ್ನಾಟಕ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಬದುಕು ಕಟ್ಟಿಕೊಂಡಿದ್ದ ಹಳಿಯಾಳದ ಹುಡುಗ. ಅಲ್ಲಿಯ ಶ್ರೀಮಂತ ಜಮೀನದಾರರಾದ ದೇಸಾಯಿ ಕುಬೇರಪ್ಪನವರ ಮಗ. ಹೊರಗೆ ಮರಾಠಿ, ಕೊಂಕಣಿ ಕೇಳುತ್ತ ಕೇಳುತ್ತ, ಮನೆಯಲ್ಲಿ ಮರಾಠಿಗನ್ನಡ ಮಾತಾಡುತ್ತ, ಶಾಲೆಯಲ್ಲಿ ಇಂಗ್ಲಿಷ್ ಸಿದ್ಧಿಸಿಕೊಂಡು, ಬರವಣಿಗೆಯಲ್ಲಿ ಕನ್ನಡವನ್ನು ಕಟ್ಟಿದ ಲೇಖಕ. 1963ರ ಮೇ ತಿಂಗಳಲ್ಲಿ ಅವರ 'ಮುಕ್ತಿ' ಕಾದಂಬರಿಯನ್ನು ಓದಿ, ಪ್ರಜ್ಞೆ ಕಳೆದುಕೊಂಡವರಂತೆ ದೀಡ ತಿಂಗಳು ನರಳಿದ್ದೆ. ಆ ಹೊತ್ತಿಗೆ ನಾನು ಅವರನ್ನು ನೋಡಿರಲಿಲ್ಲ. ನನ್ನ ಕಥೆಯನ್ನು ಈ ದೇಸಾಯರಿಗೆ ಯಾರು ಹೇಳಿರಬೇಕು, ಬೇರೆ ಬೇರೆ ಹೆಸರು ಬಳಸಿ ಅದನ್ನು ಕಥಿಸುವ, ವಿವರಿಸುವ ದಿನಚರಿಯಂಥ ಈ ಬಹುಪಾಲು ನಿರೂಪಣೆ ಸಹ ನನ್ನದೇ ಹೇಗಾಯಿತು, ಎಂದು ದಿಗಿಲಾಗಿತ್ತು.

ಪ್ರತಿಭಾವಂತ ವಿದ್ಯಾರ್ಥಿ, ಪ್ರಾಮಾಣಿಕ ವಿದ್ವತ್ತಿನ ಧಣಿಯಾಗಿದ್ದ ಶಾಂತಿನಾಥ ಇಂಗ್ಲಂಡ್‌ದಿಂದ ಡಾಕ್ಟರೇಟ್ ಹೊಂದಿ, ಇಂಗ್ಲಿಷ್ ಅಧ್ಯಾಪಕರಾಗಿ, ಧಾರವಾಡದ ಮಾತೃಸಂಸ್ಥೆಗೆ ಬಂದಿದ್ದರು. ಒಮ್ಮೆ ಸಪ್ತಾಪುರದ ಬಸ್‌ಸ್ಟಾಪ್‌ನಲ್ಲಿ ನಿಂತಿದ್ದರು. ಹೋಗಿ ಮಾತಾಡಿಸಿದೆ. "ನೀವು ಗೊತ್ತರೀ ಸಿದ್ಧಲಿಂಗ ಅವರs ನಾನೂ ಧಾರವಾಡದವನ. ಬಸ್ ಹತ್ತರಿ. ಅಲ್ಲೇ ಹೋಗಿ ಮಾತಾಡೂಣು." ಅಂದರು.